ಕಾರ್ಯಕಲಾಪಗಳನ್ನು ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 6.00 ಗಂಟೆಯವರೆಗೆ ನಡೆಸಲು ತೀರ್ಮಾನಿಸಲಾಯಿತು.

ಈ ದಿನ ದಿನಾಂಕ: 9.7.2002 ರಂದು ಗ್ರಾಮೀಣಾಬಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬೇಡಿಕೆಗಳ ಅನುದಾನದ ಮೇಲೆ ಚರ್ಚಿಸಲಾಗುವುದು. ಉಳಿದ ಬೇಡಿಕೆಗಳಲ್ಲಿ ಯಾವ ಯಾವ ಪ್ರಮುಖ ಇಲಾಖೆಗಳ ಬೇಡಿಕೆಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ವಿಧಾನ ಸಭೆಯ ವಿರೋಧ ಪಕ್ಷಗಳ ನಾಯಕರುಗಳೊಂದಿಗೆ ಸಮಾಲೋಚಿಸಿ ತದನಂತರ ಬೇಡಿಕೆಗಳ ಚರ್ಚೆಗೆ ದಿನಗಳನ್ನು ನಿಗಧಿಪಡಿಸಲಾಗುವುದು ಎಂದು ತೀರ್ಮಾನಿಸಲಾಯಿತು.

ಇದಕ್ಕೆ ಸದನದ ಸಹಮತಿಯಿದೆಯೆಂದು ಭಾವಿಸುತ್ತೇನೆ.

7) ಗೈರು ಹಾಜರಿಗೆ ಅನುಮತಿ

ಅಧ್ಯಕ್ಷರು: ಶ್ರೀ ಬಿ.ಎನ್. ಬಚ್ಚೇಗೌಡರವರು ಬರೆದ ಪತ್ರವು ನನಗೆ ಬಂದಿದ್ದು, ಅದು ಈ ರೀತಿ ಇದೆ.

"ಶ್ರೀ ಬಿ.ಎನ್. ಬಚ್ಚೇಗೌಡರವರು ಪ್ರವಾಸದಲ್ಲಿರುವುದರಿಂದ ದಿ: 8.07.2002 ರಿಂದ ಒಂದು ವಾರ ಕಾಲದವರೆಗೆ ಗೈರು ಹಾಜರಾಗಲು ಅನುಮತಿ ಕೋರಿದ್ದಾರೆ.

ಮಾನ್ಯ ಸದಸ್ಯರು ಗೈರು ಹಾಜರಾಗಲು ಸಭೆಯು ಸಮ್ಮತಿಸುತ್ತದೆಯೇ?

ಸಭೆಯು ಒಪ್ಪಿಗೆ ಸೂಚಿಸಿತು.

ಅಧ್ಯಕ್ಷರು: ಗೈರು ಹಾಜರಿಗೆ ಅನುಮತಿ ನೀಡಲಾಗಿದೆ.

ಎರಡನೆಯದಾಗಿ ಶ್ರೀ ಜಿ.ಎಸ್. ಪಾಟೀಲರವರು ಬರೆದ ಪತ್ರವು ನನಗೆ ಬಂದಿದ್ದು, ಅದು ಈ ರೀತಿ ಇದೆ;

"ಶ್ರೀ ಜಿ.ಎಸ್. ಪಾಟೀಲರವರು ಪ್ರವಾಸದಲ್ಲಿರುವುದರಿಂದ ದಿ. 8.7.2002 ರಿಂದ 20.07.2002 ರವರೆಗೆ ಗೈರು ಹಾಜರಾಗಲು ಅನುಮತಿ ಕೋರಿದ್ದಾರೆ."

ಮಾನ್ಯ ಸದಸ್ಯರು ಗೈರು ಹಾಜರಾಗಲು ಸಭೆಯು ಸಮ್ಮತಿಸುತ್ತದೆಯೇ?

ಸಭೆಯು ಒಪ್ಪಿಗೆ ಸೂಚಿಸಿತು.

ಅಧ್ಯಕ್ಷರು: ಗೈರು ಹಾಜರಿಗೆ ಅನುಮತಿ ನೀಡಲಾಗಿದೆ.

8) ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು) ಅವರು: ಮಾನ್ಯ ಅಧ್ಯಕ್ಷರೆ,

ಭಾರತ ಸಂವಿಧಾನದ 213(2) (ಎ) ಅನುಚ್ಛೇದದ ಮೇರೆಗೆ: